# ನೈವೇದ್ಯ- ದೇವರಿಗಾ ನಮಗಾ?

ನಾಗರಾಜ್ ಗುಂಡಪ್ಪ

ನೈವೇದ್ಯ ಸಮರ್ಪಣೆ ಎಂಬುದು ಪೂಜೆಯ ಒಂದು ಭಾಗ. ಆದರೆ, ಮುಂದಿಟ್ಟ ಪ್ರಸಾದ ನಿಜವಾಗಿಯೂ ದೇವರು ತಿನ್ನುತ್ತಾನ್ನ ಎನ್ನುವುದರ ಬಗ್ಗೆ ಹಲವು ಚರ್ಚೆಗಳು ನಡೆಯುತ್ತವೆ. ಈ ಕುರಿತು ಒಂದು ಸ್ವಾರಸ್ಯಕರ ಚರ್ಚೆ ಇಲ್ಲಿದೆ

**ನೈವೇದ್ಯ,** ಎಂದರೆ, ಭಕ್ಷ್ಯಗಳನ್ನು ದೇವರ ಮುಂದೆ ಇಟ್ಟು ಸಮರ್ಪಣೆ ಮಾಡಿ ಪೂಜೆಯ ನಂತರ ಅದನ್ನು ಪ್ರಸಾದ ಎಂದು ಸ್ವೀಕರಿಸುವ ರೂಢಿ ಸಾಮಾನ್ಯವಾಗಿ ಎಲ್ಲರಿಗೂ ಪರಿಚಿತ. ಈ ನೈವೇದ್ಯ ಎನ್ನುವ ಪೂಜಾಂಗದ ಬಗ್ಗೆ ಒಂದು ಆಕ್ಷೇಪಣೆ ಕೇಳಿ ಬರುವುದುಂಟು. ನಾವು ಸಮರ್ಪಣೆ ಮಾಡುವ ಭಕ್ಷ್ಯವನ್ನು ದೇವರೇನು ಬಂದು ತಿನ್ನುತ್ತಾನಾ? ಅದನ್ನು ತಿನ್ನುವುದು ನಾವೇ ಅಲ್ಲವೇ! ಆದ್ದರಿಂದ ನೈವೇದ್ಯ ಎಂದು ಮಾಡುವುದು ನಮ್ಮ ಆಸೆಯನ್ನು ಪೂರೈಸಿ ಕೊಳ್ಳುವುದಕ್ಕಾಗಿಯೇ ಹೊರತು ಅದರಲ್ಲಿ ದೇವರಿಗೆ ಸಲ್ಲುವ ಅಂಶವೇನಿಲ್ಲ. ನಮಗಿಷ್ಟವಾದ ತಿಂಡಿಗಳನ್ನು ಮಾಡಿಕೊಂಡು ನಾವು ತಿನ್ನುವುದಕ್ಕೆ ಸುಮ್ಮನೆ ದೇವರ ಹೆಸರನ್ನು ಬಳಸಿಕೊಳ್ಳುತ್ತಿದ್ದೇವೆ ಎಂದು ಹೇಳಿ ನೈವೇದ್ಯ ಹಾಗೂ ಪ್ರಸಾದದ ಬಗ್ಗೆ ಅಸಡ್ಡೆ ಉಂಟಾಗುವ ಚಿಂತನೆ ಒಂದು ಕಡೆ ಬೆಳೆಯುತ್ತಿದೆ. ಆದ್ದರಿಂದ ನೈವೇದ್ಯ ಎನ್ನುವ ಪೂಜಾಂಗದ ಹಿಂದಿರುವ ವಿಜ್ಞಾನ ಏನು? ಅದು ಹೇಗೆ ಭಗವಂತನಿಗೆ ಸಲ್ಲುತ್ತದೆ ಎಂದು ವಿಶ್ಲೇಷಣೆ ಮಾಡಬೇಕಾಗಿದೆ.



ಯಾವುದು ನಿವೇದಿಸಲ್ಪಡುತ್ತದೆಯೋ ಅದು ನೈವೇದ್ಯ. ನೈವೇದ್ಯ ಎನ್ನುವ ಪೂಜಾಂಗದಲ್ಲಿ ಏನು ನಿವೇದನೆ ಅಥವಾ ಅರಿಕೆ ಮಾಡುತ್ತೇವೆ ಎಂದರೆ, 'ಅಪ್ಪಾ! ಇದು ನೀನು ಒದಗಿಸಿರುವ ಪದಾರ್ಥ. ಇದು ನಿನ್ನದೇ' ಎಂದು ಅವನಿಗೆ ಒಪ್ಪಿಸುವುದೇ ನಿವೇದನೆ.

ಪ್ರಪಂಚದಲ್ಲಿ ಉತ್ಪತ್ತಿಯಾಗುವ ಆಹಾರವೆಲ್ಲ ಭಗವಂತನ ಕೊಡುಗೆಯೇ. ರೈತ ಬೆಳೆ ಬೆಳೆದರೂ, ಬೆಳೆಸುವ ಸಾಮರ್ಥ್ಯ ಮಣ್ಣಿನಲ್ಲೂ ಹಾಗೂ ಬೆಳೆಯುವ ಧರ್ಮವು ಬೀಜದಲ್ಲೂ ಇರುವುದು ಪ್ರಕೃತಿಗೂ ಒಡೆಯನಾದ ಭಗವಂತನ ಕೃಪೆಯಿಂದಲೇ. ಬೆಳೆಗೆ ಅವಶ್ಯವಾದ ಜಲ ಸಂಪತ್ತು ಸಹಾ ಪ್ರಕೃತಿಯ ಕೊಡುಗೆಯೇ. ಹೀಗೆ ಕೃಷಿ ಭೂಮಿಯಿಂದ ಹಿಡಿದು ಆಹಾರ ಸಿದ್ಧವಾಗುವವರೆವಿಗೂ, ಉದ್ದಕ್ಕೂ ಭಗವಂತನ ಕೃಪೆ ಹಾಗೂ ಪಾತ್ರ ಇದ್ದೇ ಇದೆ. ಆದ್ದರಿಂದ ಭಗವಂತನದೇ ಆದ ಪದಾರ್ಥವನ್ನು ಅವನದ್ದೇ ಎಂದು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವುದೇ ನಾವು ಮಾಡುವ ನಿವೇದನೆ.

ಹೀಗೆ ನಿವೇದನೆ ಮಾಡಿದಾಗ, ಭಗವಂತ ಆ ಆಹಾರ ಪದಾರ್ಥದಲ್ಲಿರುವ ಸೂಕ್ಷ್ಮಾಂಶವನ್ನು ಸ್ವೀಕರಿಸುತ್ತಾನೆ ಮತ್ತು ಆಗ ನಿವೇದಿತ ಪದಾರ್ಥವು ಪ್ರಸಾದವಾಗುತ್ತದೆ. ಭಗವಂತನಿಗೆ ಸಮರ್ಪಿಸಿದಾಗ, ಆ ಪದಾರ್ಥದಲ್ಲಿ ಭಗವಂತನ ಒಂದು ಶಕ್ತಿಹರಿದು, ಸೇವಿಸಿದವರಿಗೆ ಒಂದು ಪ್ರಸನ್ನತೆಯುಂಟು ಮಾಡುತ್ತದೆ. ಆದ್ದರಿಂದಲೇ ಆ ಭಕ್ಷ್ಯಕ್ಕೆ ಪ್ರಸಾದ ಎಂದು ಹೆಸರು.

ಇನ್ನು ಭಗವಂತ ಬಂದು ತಿನ್ನುತ್ತಾನೆಯೇ ಎನ್ನುವ ಆಕ್ಷೇಪಣೆಗೆ ಉತ್ತರ ಕೊಡುವುದಾದರೆ, ಈ ಪೂಜಾಂಗದ ಉದ್ದೇಶದಲ್ಲಿಯೇ ನಾವು ಈ ಭಕ್ಷ್ಯವನ್ನು ದೇವರಿಗೆ ತಿನ್ನಿಸುತ್ತೇವೆ ಎನ್ನುವ ಅಭಿಪ್ರಾಯವಿಲ್ಲ. ಉದಾಹರಣೆಗೆ, ದೇವರಿಗೆ ಹಾಲಿನ ಅಭಿಷೇಕ ಮಾಡಬೇಕಾದರೆ ಪೂಜೆ ಮಾಡುವವರು "ಕ್ಷೀರೇಣ ಸ್ನಪಯಾಮಿ" (ಹಾಲಿನಿಂದ ಸ್ನಾನ ಮಾಡಿಸುತ್ತೇನೆ) ಎಂದು ಹೇಳಿ ನಂತರ ಮೂರ್ತಿಯಮೇಲೆ ಹಾಲಿನ ಧಾರೆಯನ್ನು ಎರೆಯುತ್ತಾರೆ. ಆದರೆ ಭಕ್ಷ್ಯವನ್ನು ದೇವರ ಮುಂದಿಟ್ಟು "ಭಕ್ಷ್ಯಂ ಖಾದಯಾಮಿ" (ಭಕ್ಷ್ಯವನ್ನು ತಿನ್ನಿಸುತ್ತೇನೆ) ಎಂದು ಹೇಳುವುದಿಲ್ಲ. ಬದಲಾಗಿ "ಭಕ್ಷ್ಯಂ ನಿವೇದಯಾಮಿ" ಅಥವಾ "ಸಮರ್ಪಯಾಮಿ" ಎಂದು ಹೇಳುತ್ತಾರೆ. ಆದುದರಿಂದ ನೈವೇದ್ಯವೆಂಬ ಪೂಜಾಂಗದಲ್ಲಿ ದೇವರು ಬಂದು ಅದೆಲ್ಲವನ್ನೂ ತಿನ್ನುತ್ತಾನೆ ಎನ್ನುವ ನಿರೀಕ್ಷೆಯಿಲ್ಲ. ಎರಡನೆಯದಾಗಿ, ಆಹಾರದ ಸೂಕ್ಷ್ಮಾಂಶವನ್ನು ಭಗವಂತನು ಪರಿಗ್ರಹಿಸುವುದರಿಂದ ಆ ಪದಾರ್ಥವು ಭಗವಂತನಿಗೆ ಸಮರ್ಪಿತವೂ ಸಹಾ ಆಗುತ್ತದೆ.

ಆದ್ದರಿಂದ ನೈವೇದ್ಯ ಎನ್ನುವ ಪೂಜಾಂಗ ನಿರರ್ಥಕವಲ್ಲ. ಅದು ಬಹಳ ಸೂಕ್ಷ್ಮವಾಗಿ ಅರ್ಥ ಮಾಡಿಕೊಳ್ಳಬೇಕಾದಂತಹ ವಿಜ್ಞಾನದಿಂದ ಕೂಡಿದ್ದು ಆರಾಧಕರಿಗೆ ಭೌತಿಕ, ದೈವಿಕ, ಅಧ್ಯಾತ್ಮಿಕ ಪ್ರಯೋಜನಗಳನ್ನು ಕೊಡುವಂತಹ ಸಾರ್ಥಕವಾದ ಆಚರಣೆಯಾಗಿದೆ.



ಮಾನಸ ಗಂಗೋತ್ರಿಯ ರೌಂಡ್ ಕ್ಯಾಂಟೀನ್

# ಡೌನ್ಸ್.. ವೈಭವ ಕಣ್ಮರೆ

ಒಂದನೇ ಪುಟದಿಂದ

ಗುರು ಹಾಗೂ ಶಿಷ್ಯರ ಪಟಾಲಂ, ವಿಚಾರವಾದಿಗಳು, ವಿತಂಡವಾದಿಗಳು ಗಹನವಾಗಿ ಚರ್ಚಿಸುತ್ತಿದ್ದ, ಪ್ರೇಮಿಗಳು, ಭಗ್ನ ಪ್ರೇಮಿಗಳು ಸದಾ ಎಡತಾಕುತ್ತಿದ್ದ ಜಾಗದ ಇತಿಹಾಸವೇ ರೋಮಾಂಚಕ.

ಅತ್ತ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು ಕಡೆಯಿಂದ ಬಂದರೂ, ಇತ್ತ ಮಾನಸ ಗಂಗೋತ್ರಿಯ ಹೃದಯಭಾಗದಂತಿರುವ ಲೈಬ್ರರಿ ಕಡೆಯಿಂದ ಬಂದರೂ ಇಳಿಜಾರು ಇರುವುದ ರಿಂದ ಇದಕ್ಕೆ ಡೌನ್ ಕ್ಯಾಂಟೀನ್ ಎಂದು ಕರೆಯಲಾಗುತ್ತಿತ್ತು.

ಮಾವು, ತೆಂಗು ಸಪೋಟ ಸೇರಿದಂತೆ ವಿವಿಧ ಗಿಡಗಳಿಂದಾಗಿ ಹಸಿರಿನಿಂದ ಕೂಡಿದ್ದ, ಸದಾ ತಂಗಾಳಿ ಮೈಸೋಕುತ್ತಿದ್ದ ಕಾರಣದಿಂದಾಗಿಯೂ ಅದು ವಾಯುವಿಹಾರಿಗಳ ನೆಚ್ಚಿನ ತಾಣವಾಗಿತ್ತು. ಜೆಸಿಯಲ್ಲಿ ಓದುತ್ತಿದ್ದ ಹೈಫ್ ಮಂದಿ, ಶಾರ್ಟ್ಸ್, ಸ್ಕರ್ಟ್ ಅಂತ ಮಾಡ್ರನ್ ಡ್ರೆಸ್ ಹಾಕಿಕೊಂಡು ಕಾರಿನ ಬಾನೆಟ್ ಮೇಲೆ ಕುಳಿತು ಹರಟೆ ಹೊಡೆಯುವ ಹೆಣ್ಣೈಕ್ಳುಗಳಿಂದಾಗಿಯೇ ಆ ಜಾಗ ಹೆಚ್ಚು ಆಕರ್ಷಣೀಯವಾಗಿತ್ತು ಎಂಬುದು ಸುಳ್ಳಲ್ಲ.

**₹150 ಕೋಟಿಯಲ್ಲಿ ಹೊಸ ಕಟ್ಟಡ:** ಆದರೆ, 2016ರಲ್ಲಿ ಕೇಂದ್ರ ಸರ್ಕಾರದ ₹150 ಕೋಟಿ ಅನುದಾನದಲ್ಲಿ ಕ್ಯಾಂಟೀನ್ ಅನ್ನು ಮೇಲ್ದರ್ಜೆಗೆ ಏರಿಸುವ ಕಾಮಗಾರಿ ನಡೆಸಲಾಗುತ್ತಿದೆ. ಇದರಿಂದಾಗಿ ಹಳೆಯ ಮಳಿಗೆಗಳನ್ನು ಮುಚ್ಚಿ ಅದೇ ಜಾಗದಲ್ಲಿ ಭವ್ಯ ಕಟ್ಟಡ ಮೈದಳೆದಿದೆ. ಆದರೆ, ಅದಕ್ಕೆ ಇನ್ನೂ ಉದ್ಘಾಟನೆ ಭಾಗ್ಯ ಕೂಡಿಬಂದಿಲ್ಲ.

ಎರಡು ಅಂತಸ್ಥಿನ ಈ ಕಟ್ಟಡದೊಳಗೆ ವಿವಿಧ ಮಳಿಗೆಗಳನ್ನು ನಿರ್ಮಿಸಲಾಗಿದೆ. ಎರಡನೇ ಮಹಡಿಯಲ್ಲಿ ವಿಶಾಲವಾದ ಜಾಗದಲ್ಲಿ ಕ್ಯಾಂಟೀನ್ ಸೌಲಭ್ಯಕ್ಕೆ ಅವಕಾಶ ಕಲ್ಪಿಸಲಾಗಿದ್ದು ಹೊಸ ರೂಪ ನೀಡಲಾಗುತ್ತಿದೆ.

'ಕಾಂಕ್ರೀಟ್ ಕಟ್ಟಡದೊಳಗೆ ಮಳಿಗೆಗಳನ್ನು ನಿರ್ಮಿಸಲಾಗುತ್ತಿದೆ. ಅಭಿವೃದ್ಧಿ ಎನ್ನುವ ಹೆಸರಿನಲ್ಲಿ ಮಾತ್ರ ಈ ಕಟ್ಟಡವನ್ನು ನಿರ್ಮಿಸಲಾಗಿದೆ. ಆದರೆ, ಹೊರಾಂಗಣದಲ್ಲಿ, ಮರದ ನೆರಳಿನಲ್ಲಿ, ತಂಗಾಳಿಯನ್ನು ಆಸ್ವಾದಿಸುತ್ತ ಚರ್ಚೆಗಳಲ್ಲಿ ಭಾಗವಹಿಸುವುದು, ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗುವುದರಿಂದ ಸಿಗುವ ಉತ್ಸಾಹ ಇಲ್ಲಿ ಸಿಗಲು ಸಾಧ್ಯವೇ ಇಲ್ಲ ಎನ್ನುತ್ತಾರೆ ಮಾನಸ ಗಂಗೋತ್ರಿಯ ಹಿರಿಯ ವಿದ್ಯಾರ್ಥಿ ಫಾಲಾಕ್ಷ.

**ಆಕರ್ಷಿಸುತ್ತಿದೆ ರೌಂಡ್ ಕ್ಯಾಂಟೀನ್:** ಡೌನ್ಸ್ ಕ್ಯಾಂಟೀನ್ ಮುಚ್ಚಿರುವ ಕಾರಣ ಮಾನಸ ಗಂಗೋತ್ರಿಯ ಹೃದಯ ಭಾಗದಲ್ಲಿರುವ ರೌಂಡ್ ಕ್ಯಾಂಟೀನ್ ಎಲ್ಲರನ್ನೂ ತನ್ನತ್ತ ಆಕರ್ಷಿಸುತ್ತಿದೆ. ಈಗ ಇದು ವಿದ್ಯಾರ್ಥಿಗಳ ನೆಚ್ಚಿನ ತಾಣವಾಗಿದೆ.

ಗೋಳಾಕಾರದಲ್ಲಿ ಇರುವ ಈ ಕ್ಯಾಂಟೀನ್ ಈಗ ಮುಂದಿರುವ ಆವರಣಕ್ಕೂ ವಿಸ್ತರಿಸಿದ್ದು, ವಿದ್ಯಾರ್ಥಿಗಳಿಗೆ ಆರಾಮವಾಗಿ ಕುಳಿತು ಹೊಟ್ಟೆಯೊಂದಿಗೆ ಮಸ್ತಕಾಭಿವೃದ್ಧಿಗೆ ಉತ್ತಮ ವಾತಾವರಣ ನಿರ್ಮಿಸಿದೆ. ಈಗ ಡೌನ್ಸ್‌ಗೆ ಪರ್ಯಾಯವಾಗಿರುವ ಈ ಕ್ಯಾಂಟೀನ್ ಇತ್ತೀಚಿನ ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಾಗಿದೆ. ಆದರೆ, ಹಿರಿಯ ವಿದ್ಯಾರ್ಥಿಗಳು ಎಂದಿಗೂ ಡೌನ್ಸ್‌ನ ಒಡನಾಟವನ್ನು ಮರೆಯಲು ಸಾಧ್ಯವೇ ಇಲ್ಲ.

# ರೈಲುಗಳ ಮಾಹಿತಿ



***ಪ್ಯಾಸೆಂಜರ್, **ಎಕ್ಸ್‌ಪ್ರೆಸ್, ***ಸೂಪರ್ ಫಾಸ್ಟ್**

**ಭದ್ರತಾ ಸಹಾಯ ವಾಣಿ 182, ಸೇವಾ ಸಹಾಯವಾಣಿ 183, ವಿಚಾರಣೆ 139**

| ಗಾಡಿ ಸಂಖ್ಯೆ | ಹೆಸರು | ಮೈಸೂರಿನಿಂದ | ಬೆಂಗಳೂರಿಗೆ | ಬೆಂಗಳೂರಿನಿಂದ | ಮೈಸೂರಿಗೆ |
|---|---|---|---|---|---|
| 22818/22817 | ಮೈಸೂರು-ಹೌರಾ***(ಸಾಪ್ತಾಹಿಕ) | ರಾತ್ರಿ12.30(ಸೋಮ) | ರಾತ್ರಿ 2.50 | ರಾತ್ರಿ 1 (ಭಾನು) | ರಾತ್ರಿ 3.45 |
| 12610/12609 | ಚೆನ್ನೈ ಎಕ್ಸ್‌ಪ್ರೆಸ್ | ಬೆಳಿಗ್ಗೆ 4.45 | ಬೆಳಿಗ್ಗೆ 7.45 | ರಾತ್ರಿ 8.10 | ರಾತ್ರಿ 11.30 |
| 16217/16218 | ಮೈಸೂರು-ಶಿರಡಿ**(ಸಾಪ್ತಾಹಿಕ) | ಬೆಳಿಗ್ಗೆ 5.30(ಸೋಮ) | ಬೆಳಿಗ್ಗೆ 8.27 | ರಾತ್ರಿ 3.30 | ಬೆಳಿಗ್ಗೆ 6 (ಗುರು) |
| 16518/16517 | ಕಣ್ಣೂರು ಎಕ್ಸ್‌ಪ್ರೆಸ್ | ಬೆಳಿಗ್ಗೆ 5.30 | ಬೆಳಿಗ್ಗೆ 8.20 | ರಾತ್ರಿ 8.30(ಸೋ., ಮಂ., ಭಾನು) | ರಾತ್ರಿ 11.05 |
| 56231/56232 | ಮೈಸೂರು-ಬೆಂಗಳೂರು* | ಬೆಳಿಗ್ಗೆ 6.10 | ಬೆಳಿಗ್ಗೆ 9:15 | ಬೆಳಿಗ್ಗೆ 9.20 | ಮಧ್ಯಾಹ್ನ12.35 |
| 17326/17325 | ಮೈಸೂರು-ಹುಬ್ಬಳ್ಳಿ (ವಿಶ್ವಮಾನವ) | ಬೆಳಿಗ್ಗೆ 5.50 | ಬೆಳಿಗ್ಗೆ 8.55 | ಸಂಜೆ 5.45 | ರಾತ್ರಿ 8.40 |
| 16215/16216 | ಚಾಮುಂಡಿ ಎಕ್ಸ್‌ಪ್ರೆಸ್** | ಬೆಳಿಗ್ಗೆ 6.45 | ಬೆಳಿಗ್ಗೆ 9.35 | ಸಂಜೆ 6.15 | ರಾತ್ರಿ 9.05 |
| 12578/12577 | ಮೈಸೂರು-ಭಾಗಮತಿ*(ಸಾಪ್ತಾಹಿಕ) | ಬೆಳಿಗ್ಗೆ 7.20 (ಶನಿ) | ಬೆಳಿಗ್ಗೆ 9.55 | ರಾತ್ರಿ 8.55 (ಗುರು) | ರಾತ್ರಿ 11.30 |
| 16229/16230 | ಮೈಸೂರು-ವಾರಾಣಸಿ** | ಬೆಳಿಗ್ಗೆ 7.20 | ಬೆಳಿಗ್ಗೆ 9.55 | ನಸುಕು 12.15 (ಭಾನು,ಮಂಗಳ) | ನಸುಕು 2.55 |
| 16023/16024 | ಮಾಲ್ಗುಡಿ ಎಕ್ಸ್‌ಪ್ರೆಸ್ | ಬೆಳಿಗ್ಗೆ 8.25 | ಬೆಳಿಗ್ಗೆ 10.55 | ಮಧ್ಯಾಹ್ನ 1.30 | ಸಂಜೆ 4 |
| 56281/56282 | ಬೆಂಗಳೂರು- ಚಾಮರಾಜನಗರ * | ಬೆಳಿಗ್ಗೆ 9.05 | ಮಧ್ಯಾಹ್ನ 12.15 | ಮಧ್ಯಾಹ್ನ 3.30 | ಸಂಜೆ 6.40 |
| 12975/12976 | ಮೈಸೂರು-ಜೈಪುರ***(ಗುರು,ಶನಿ) | ಬೆಳಿಗ್ಗೆ 10.30 | ಮಧ್ಯಾಹ್ನ 12.55 | ಮಧ್ಯಾಹ್ನ 1(ಬುಧ, ಶುಕ್ರ) | ಸಂಜೆ 3.45 |
| 12613/12614 | ಟಿಪ್ಪು ಎಕ್ಸ್‌ಪ್ರೆಸ್*** | ಬೆಳಿಗ್ಗೆ 11.30 | ಮಧ್ಯಾಹ್ನ 2.00 | ಮಧ್ಯಾಹ್ನ 3.15 | ಸಂಜೆ 5.45 |
| 17307/17308 | ಮೈಸೂರು-ಬಾಗಲಕೋಟೆ (ಬಸವ)** | ಮಧ್ಯಾಹ್ನ 1.30 | ಸಂಜೆ 4.30 | ಬೆಳಿಗ್ಗೆ 11.15 | ಮಧ್ಯಾಹ್ನ 1.50 |
| 12008/12007 | ಶತಾಬ್ದಿ ಎಕ್ಸ್‌ಪ್ರೆಸ್*** (ಬುಧವಾರ ಹೊರತುಪಡಿಸಿ) | ಮಧ್ಯಾಹ್ನ 2.15 | ಸಂಜೆ 4.15 | ಬೆಳಿಗ್ಗೆ 11 | ಮಧ್ಯಾಹ್ನ 1 |
| 16557/16558 | ರಾಜ್ಯರಾಣಿ ಎಕ್ಸ್‌ಪ್ರೆಸ್ | ಮಧ್ಯಾಹ್ನ 2.30 | ಸಂಜೆ 5.10 | ಬೆಳಿಗ್ಗೆ 10.30 | ಮಧ್ಯಾಹ್ನ 1.30 |
| 12786/12785 | ಕಾಚಿಗುಡ ಮೈಸೂರು ಎಕ್ಸ್‌ಪ್ರೆಸ್ | ಮಧ್ಯಾಹ್ನ 2.45 | ಸಂಜೆ 4.15 | ಬೆಳಿಗ್ಗೆ 6.40 | ಬೆಳಿಗ್ಗೆ 9.45 |
| 56237/56238 | ಮೈಸೂರು-ಬೆಂಗಳೂರು* | ಮಧ್ಯಾಹ್ನ 2.45 | ಸಂಜೆ 6 | ಸಂಜೆ 7 | ರಾತ್ರಿ 10.20 |
| 16232/16231 | ಮೈಸೂರು-ಮೈಲಾಡುತುರೈ** | ಸಂಜೆ 4.15 | ಸಂಜೆ 6.45 | ಬೆಳಿಗ್ಗೆ 5.50 | ಬೆಳಿಗ್ಗೆ 8.30 |
| 16535/16536 | ಮೈ -ಸೊಲ್ಲಾಪುರ(ಗೋಲ್‌ಗುಂಬಜ್) | ಮಧ್ಯಾಹ್ನ 3.30 | ಸಂಜೆ 6.50 | ಬೆಳಿಗ್ಗೆ 8.05 | ಬೆಳಿಗ್ಗೆ 11 |
| 16219/16220 | ಚಾಮರಾಜನಗರ-ತಿರುಪತಿ* | ಸಂಜೆ 5 | ರಾತ್ರಿ 8.15 | ಬೆಳಿಗ್ಗೆ 7.30 | ಬೆಳಿಗ್ಗೆ 10.25 |
| 16236/16235 | ಮೈಸೂರು-ಟುಟಿಕೋರಿನ್** | ಸಂಜೆ 6.05 | ರಾತ್ರಿ 9.05 | ಬೆಳಿಗ್ಗೆ 7 | ಬೆಳಿಗ್ಗೆ 9.55 |
| 16210/16209 | ಮೈಸೂರು- ಅಜ್ಮೀರ್ ** | ಸಂಜೆ 6.30 (ಮಂಗಳ, ಗುರು) | ರಾತ್ರಿ 9.30 | ರಾತ್ರಿ 3.30 (ಶುಕ್ರ, ಭಾನು) | ಬೆಳಿಗ್ಗೆ 6 |
| 16592/16591 | ಮೈಸೂರು-ಹುಬ್ಬಳ್ಳಿ (ಹಂಪಿ)** | ಸಂಜೆ 7.00 | ರಾತ್ರಿ 9.55 | ಬೆಳಿಗ್ಗೆ 6.20 | ಬೆಳಿಗ್ಗೆ 9.10 |
| 56234/56233 | ಮೈಸೂರು-ಬೆಂಗಳೂರು*(ಸಾಪ್ತಾಹಿಕ) | ಸಂಜೆ 7.10 | ರಾತ್ರಿ 10.25 | ಬೆಳಿಗ್ಗೆ 5 | ಬೆಳಿಗ್ಗೆ 8.00 |
| 22681/22682 | ಮೈಸೂರು-ಚೆನ್ನೈ*** | ರಾತ್ರಿ 8.10 (ಬುಧ) | ರಾತ್ರಿ 10.45 | ಬೆಳಿಗ್ಗೆ 5.25 (ಶುಕ್ರ) | ಬೆಳಿಗ್ಗೆ 8.10 |
| 16022/16021 | ಮೈಸೂರು-ಚೆನ್ನೈ (ಕಾವೇರಿ)** | ರಾತ್ರಿ 8.30 | ರಾತ್ರಿ 11.25 | ಬೆಳಿಗ್ಗೆ 3.50 | ಬೆಳಿಗ್ಗೆ 6.40 |
| 56263/56264 | ಮೈಸೂರು-ಬೆಂಗಳೂರು* | ರಾತ್ರಿ 11.55 | ಬೆಳಿಗ್ಗೆ 4:15 | ರಾತ್ರಿ 11.55 | ನಸುಕಿನ 4 |
| 06576/06575 | ಮೆಮು | ರಾತ್ರಿ 11.55 | ರಾತ್ರಿ 1.50 | ರಾತ್ರಿ 7.50 | ರಾತ್ರಿ 11.30 |

## ಮೈಸೂರು-ಅರಸೀಕೆರೆ ರೈಲುಗಾಡಿಗಳ ವೇಳಾಪಟ್ಟಿ

| ಗಾಡಿ ಸಂಖ್ಯೆ | ಹೆಸರು | ಮೈಸೂರಿನಿಂದ | ಅರಸೀಕೆರೆಗೆ | ಅರಸೀಕೆರೆಯಿಂದ | ಮೈಸೂರಿಗೆ |
|---|---|---|---|---|---|
| 16206/16205 | ಮೈಸೂರು-ತಾಳಗುಪ್ಪಾ** | ಬೆಳಿಗ್ಗೆ 6.00 | ಬೆಳಿಗ್ಗೆ 8.48 | ಸಂಜೆ 6.50 | ರಾತ್ರಿ 10.15 |
| 11036/11035 | ಮೈಸೂರು-ದಾದರ್ (ಶರಾವತಿ)** | ಬೆಳಿಗ್ಗೆ 6.15 (ಭಾನು) | ಬೆಳಿಗ್ಗೆ.9.10 | ಸಂಜೆ 6.05 (ಶುಕ್ರ) | ರಾತ್ರಿ 9.40 |
| 17326/17325 | ಮೈಸೂರು- ಹುಬ್ಬಳ್ಳಿ (ಬೆಂಗಳೂರು ಮಾರ್ಗ) | ಬೆಳಿಗ್ಗೆ 6.10 | ಮಧ್ಯಾಹ್ನ 12.20 | ಮಧ್ಯಾಹ್ನ 1.15 | ರಾತ್ರಿ 8.40 |
| 56266/56265 | ಮೈಸೂರು-ಅರಸೀಕೆರೆ* | ಬೆಳಿಗ್ಗೆ 6.30 | ಬೆಳಿಗ್ಗೆ 10.40 | ಸಂಜೆ 5.30 | ರಾತ್ರಿ 9.25 |
| 16229/16230 | ಮೈಸೂರು-ಬಿಎಸ್‌ಬಿ | ಬೆಳಿಗ್ಗೆ 7.20 (ಮಂಗಳ/ಗುರು) | ಮಧ್ಯಾಹ್ನ 1.10 | ರಾತ್ರಿ 8.50 (ಸೋಮ/ಶನಿ) | ರಾತ್ರಿ 2.50 |
| 56270/56269 | ಮೈಸೂರು-ಶಿವಮೊಗ್ಗ* | ಬೆಳಿಗ್ಗೆ 10.20 | ಮಧ್ಯಾಹ್ನ 1.45 | ಮಧ್ಯಾಹ್ನ 12.30 | ಸಂಜೆ 4.30 |
| 16535/16536 | ಮೈಸೂರು-ಗೋಲಗುಂಬಜ್ (ಬೆಂಗಳೂರು ಮಾರ್ಗ) | ಮಧ್ಯಾಹ್ನ 3.30 | ರಾತ್ರಿ 9.45 | ಬೆಳಿಗ್ಗೆ 4.13 | ಬೆಳಿಗ್ಗೆ 11.00 |
| 56268/56267 | ಮೈಸೂರು-ಅರಸೀಕರೆ* | ಸಂಜೆ 6.20 | ರಾತ್ರಿ 10.40 | ಬೆಳಿಗ್ಗೆ 5 | ಬೆಳಿಗ್ಗೆ 9.30 |
| 16210/16209 | ಮೈಸೂರು-ಅಜ್ಮೀರ್ ಎಕ್ಸ್‌ಪ್ರೆಸ್ | ಸಂಜೆ 6.30 (ಮಂಗಳ/ಗುರು) | ರಾತ್ರಿ 12.45 | ರಾತ್ರಿ10.55(ಸೋಮ/ಶನಿ) | ಬೆಳಿಗ್ಗೆ 6.00 |
| 12781/12782 | ಸ್ವರ್ಣಜಯಂತಿ** | ರಾತ್ರಿ 8.10 (ಶುಕ್ರ) | ರಾತ್ರಿ 11.05 | ರಾತ್ರಿ 1.40 (ಬುಧ) | ನಸುಕಿನ 4.55 |
| 17301/17302 | ಮೈಸೂರು-ಶಿವಮೊಗ್ಗ (ಧಾರವಾಡ) | ರಾತ್ರಿ 10.30 | ರಾತ್ರಿ 1.35 | ರಾತ್ರಿ 3.05 | ಬೆಳಿಗ್ಗೆ 7 |
| 56216/56215 | ಮೈಸೂರು-ಶ್ರವಣಬೆಳಗೊಳ* | ಬೆಳಿಗ್ಗೆ 11.05 | ಮಧ್ಯಾಹ್ನ1.40(ಶ್ರ.ಗೊಳ) | ಸಂಜೆ 4.20 (ಶ್ರ.ಗೊಳ) | ರಾತ್ರಿ 7.25 |

## ಮೈಸೂರು-ಚಾಮರಾಜನಗರ ಮಾರ್ಗ

| ಗಾಡಿ ಸಂಖ್ಯೆ | ಮೈಸೂರಿನಿಂದ | ನಂಜನಗೂಡಿಗೆ | ಚಾಮರಾಜನಗರಕ್ಕೆ | ಚಾ.ರಾಜನಗರದಿಂದ | ನಂಜನಗೂಡಿಗೆ | ಮೈಸೂರಿಗೆ |
|---|---|---|---|---|---|---|
| 56202/56281 | ಬೆಳಿಗ್ಗೆ 5 | ಬೆಳಿಗ್ಗೆ 5.39 | ಬೆಳಿಗ್ಗೆ 6.40 | ಬೆಳಿಗ್ಗೆ 7.00 | ಬೆಳಿಗ್ಗೆ 7.55 | ಬೆಳಿಗ್ಗೆ 9.00 |
| 56204/56203 | ಬೆಳಿಗ್ಗೆ 7.20 | ಬೆಳಿಗ್ಗೆ 8 | ಬೆಳಿಗ್ಗೆ 9.10 | ಬೆಳಿಗ್ಗೆ 10.40 | ಬೆಳಿಗ್ಗೆ 11.30 | ಮಧ್ಯಾಹ್ನ 12.25 |
| 56206/56205 | ಬೆಳಿಗ್ಗೆ 9 | ಬೆಳಿಗ್ಗೆ 9.45ನಂಜನಗೂಡು ಮಾತ್ರ | ಬೆಳಿಗ್ಗೆ 10 | ಬೆಳಿಗ್ಗೆ 11.00 | | |
| 56220/16219 | ಬೆಳಿಗ್ಗೆ 10.30 | ಬೆಳಿಗ್ಗೆ 11.13 | ಮಧ್ಯಾಹ್ನ 12.30 | ಮಧ್ಯಾಹ್ನ 3:10 | ಮಧ್ಯಾಹ್ನ 3.40 | ಸಂಜೆ 4.55 |
| 56210/56209 | ಮಧ್ಯಾಹ್ನ 12.30 | ಮಧ್ಯಾಹ್ನ 1.10 | ಮಧ್ಯಾಹ್ನ 2.15 | ಸಂಜೆ 6 | ಸಂಜೆ 6.43 | ಸಂಜೆ 7.50 |
| 56208/56207 | ಮಧ್ಯಾಹ್ನ 2.50 | ಮಧ್ಯಾಹ್ನ 3.35 | ಸಂಜೆ 4.40 | ಸಂಜೆ 4.55 | ಸಂಜೆ 5.40 | ಸಂಜೆ 6.35 |
| 56282/56201 | ಸಂಜೆ 6.45 | ಸಂಜೆ 7.29 | ರಾತ್ರಿ 8.35 | ರಾತ್ರಿ 8.50 | ರಾತ್ರಿ 9.35 | ರಾತ್ರಿ 10.30 |

# ಶಾಲೆಗೆ ಹೊರಟಿತು ಮಗು...



ಚಿಲಿಶಾ, ವಿಜಯನಗರ 4ನೇ ಹಂತ



ಚಾರ್ವಿ, ಎಸ್‌ವಿಇಐ ಪಬ್ಲಿಕ್ ಶಾಲೆ, ವಿಜಯನಗರ 4ನೇ ಹಂತ



ಬಿ.ಎಂ.ಅವ್ಯಾನ್, ಹೆಬ್ಬಾಳ್



ಟಿ.ಎಸ್.ಸಂಸ್ಕೃತಿ, ಕೆ.ಆರ್.ಮೊಹಲ್ಲಾ



ದಿಶಾ ದಯಾನಂದ, ಕುವೆಂಪುನಗರ



ಕೆ.ಎಸ್.ಜಾನ್ವಿ, ಹೆಬ್ಬಾಳ್ 2ನೇ ಹಂತ

ಓದುಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು ಆಯ್ದ ಫೋಟೊಗಳನ್ನು ಇಲ್ಲಿ ಪ್ರಕಟಿಸಲಾಗಿದೆ



ಜ್ಞಾನದೇವಿ, ದಟ್ಟಗಳ್ಳಿ



ಪಿ.ಡಿ.ಹೇಮಾನಿ, ದಟ್ಟಗಳ್ಳಿ



ಕೆ.ಹರ್ಷಿತಾ, ನಂದಿನಿ ಬಡಾವಣೆ